# ‘ವಾಕ್ಯಪದೀಯ’ದಲ್ಲಿ ಬ್ರಹ್ಮತತ್ತ್ವ

ಡಾ. ಕೆ. ಎಲ್. ಪ್ರಸನ್ನಾಕ್ಷೀ

ಎಲ್ಲ ಬಗೆಯ ಜ್ಞಾನಗಳೂ ಅಧ್ಯಾತ್ಮದಲ್ಲಿ ಒಂದಾಗುವುದನ್ನು ಭಾರತೀಯ ಪರಂಪರೆಯಲ್ಲಿ ಕಾಣಬಹುದು. ವ್ಯಾಕರಣ ಶಾಸ್ತ್ರಗ್ರಂಥಗಳಲ್ಲಿ ಕೆಲವು ಒಂದು ಹಂತದಲ್ಲಿ ತತ್ತ್ವಶಾಸ್ತ್ರವೂ ದರ್ಶನಶಾಸ್ತ್ರವೂ ಆಗಿ ಕಂಡುಬರುತ್ತವೆ. ಮಹಾನ್ ದಾರ್ಶನಿಕ ಭರ್ತೃಹರಿಯ ‘ವಾಕ್ಯಪದೀಯ’ ಈ ಸಾಲಿಗೆ ಸೇರುವ ವಿಶಿಷ್ಟ ಕೃತಿ. ಇದನ್ನು ಕುರಿತು ಬರೆದಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ವ್ಯಾಸಂಗ, ಶಾಸ್ತ್ರ ಹಾಗೂ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು ‘ವಿವೇಕಪ್ರಭ’ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

## ಪೀಠಿಕೆ

ಸೃಷಿಯಾದ ಎಲ್ಲಾ ಜೀವಗಳೂ ನಿರ್ದಿಷ್ಟ ಕಾಲಮಿತಿಯ ಆಯುಃಪ್ರಮಾಣವನ್ನು ಹೊತ್ತು ಬಂದಿರುತ್ತದೆ. ಆ ಆಯಸ್ಸಿನ ಸಾರ್ಥಕತೆ ಆಗುವುದು ಹೇಗೆ? ಅದು ಯಾವುದರಿಂದ ಸಾಧಿತವಾಗುತ್ತದೆ? — ಹಣದಿಂದಲೆ? ಆಸ್ತಿಯಿಂದಲೆ? ಅಧಿಕಾರದಿಂದಲೆ? ಸ್ಥಾನಮಾನಗಳನ್ನು ಗಳಿಸುವುದರಿಂದಲೇ! ಸುಖ-ಭೋಗ ಅನುಭೂತಿಯಿಂದಲೆ?..... ಎಂದೆಲ್ಲಾ ವಿವೇಚಿಸುತ್ತಾ ವಿಶ್ಲೇಷಿಸುತ್ತಾ ಮಾನವನ ಮನ-ಬುದ್ಧಿಗಳು ಮೇಲೆ ಹೇಳಿದ ಎಲ್ಲವೂ — **‘ಶ್ವೋಭಾವೋ ಮರ್ತ್ಯಸ್ಯ’**-ಕೇವಲ ಅಲ್ಪಕಾಲ ಮಾತ್ರ ಇರುವವು; ಮತ್ತು ಇವು ಕೊಡುವ ಸುಖ ಶಾಂತಿ ನೆಮ್ಮದಿ ತೃಪ್ತಿಗಳೂ ಅಲ್ಪಕಾಲ ಮಾತ್ರದ್ದು; ಇವುಗಳನ್ನು ಅನುಭವಿಸುವ ಪಾಲಿಸುವ ಶಕ್ತಿ ಇಂದ್ರಿಯಗಳಲ್ಲಿ ಕುಂಠಿತವಾದಾಗ, ಇವೆಲ್ಲಾ ಇದ್ದೂ ಯಾವ ಪ್ರಯೋಜನವೂ ಇಲ್ಲ; ಹಾಗಾದರೆ ಜೀವಿತದ ಉದ್ದೇಶ್ಯ ಏನು? — ಎಂಬ ಮಾನವನ ವಿಚಿಕಿತ್ಸಕ ದೃಷ್ಟಿಗೆ ಅಂತರಂಗ ಅನುಭವಕ್ಕೆ ಬೋಧವಾದುದೇ - ತನ್ನನ್ನು ತಾನು ಅರಿಯುವುದು, ತನ್ನ ಪರಮ ಮೂಲನೆಲೆಯನ್ನು ಅರಿಯುವುದು — ಜೀವಿತದ ಪರಮಗುರಿ ಎಂದು. ಆ ಮಾರ್ಗದಲ್ಲಿ ಯತ್ನಶೀಲನಾದವನು ತನ್ನ ಮೂಲವಾದ ಪರತತ್ತ್ವ(ಪರಬ್ರಹ್ಮ) ವಸ್ತುವನ್ನು ಕಂಡ, **‘ವೇದಾಹಮೇತಂ ಪುರುಷಂ ಮಹಾಂತಂ’** ಎಂದು ಉದ್ಗರಿಸಿದ. ಈತ ಕಂಡದ್ದು ಮಾತ್ರ ಆ ಪರತತ್ತ್ವದ ಸ್ವರೂಪವೇ! ಅದಕ್ಕೆ ಬೇರೊಂದು ರೂಪ, ಬೇರೊಂದು ಸ್ಥಿತಿ ಇರಲು ಸಾಧ್ಯವೆ? ಆತ ಅದನ್ನು ಕಂಡ ಮಾರ್ಗ ಮಾತ್ರ ಅದನ್ನು ಹೊಂದಲು ಇರುವ ಮಾರ್ಗವೆ? ಬೇರೆ ಮಾರ್ಗ ಬೇರೆ ಕ್ರಮ ಇರಲು ಸಾಧ್ಯವಿಲ್ಲವೆ? ...ಇದೇ ಮುಂತಾದ ಚಿಂತನೆಗಳಿಂದ ಬೇರೆ ಬೇರೆ ರೀತಿಯಲ್ಲಿ ಮನುಷ್ಯ ತನ್ನ ಪ್ರಯತ್ನ ಮುಂದುವರಿಸಿದ — ಆತನ ಈ ರೀತಿಯ ಪ್ರಯತ್ನಗಳ ಫಲವೇ ವಿವಿಧ ದರ್ಶನಗಳು. ಇವುಗಳಲ್ಲಿ ‘ವೈಯಾಕರಣ ದರ್ಶನ’ವೂ ಒಂದು. ಇದು ವ್ಯಾಕರಣಶಾಸ್ತ್ರವು ಪ್ರತಿಪಾದಿಸುವ ಶಬ್ದಸ್ವರೂಪದ ಪರಬ್ರಹ್ಮ ತತ್ತ್ವದರ್ಶನ.

## ವ್ಯಾಕರಣ ಶಾಸ್ತ್ರದ ಉಗಮ

ಸಂಸ್ಕೃತ ವ್ಯಾಕರಣ ಶಾಸ್ತ್ರವು, ನೃತ್ಯ ಮಾಡುತ್ತಿದ್ದ ಪರಮೇಶ್ವರನು ತನ್ನ ನೃತ್ಯದ ಕೊನೆಯಲ್ಲಿ ಹದಿನಾಲ್ಕು ಬಾರಿ ನುಡಿಸಿದ ಡಮರುವಿನ ‘ಅಇಉಣ್, ಋಲೃಕ್, ಏಓಙ್....’ ನಿನಾದವನ್ನು ಮೂಲವಾಗಿ ಹೊಂದಿದೆ.

೧) ಪಾಣಿನಿ ಮುನಿ ರಚಿಸಿದ **‘ಅಷ್ಟಾಧ್ಯಾಯೀ’** ೨)ಕಾತ್ಯಾಯನ ಮುನಿಯ **‘ವಾರ್ತಿಕ’** ಮತ್ತು ೩) ಪತಂಜಲಿ ಮುನಿಗಳ **‘ಮಹಾಭಾಷ್ಯ’** — ಈ ಮೂರು ಈ ಶಾಸ್ತ್ರದ ಪ್ರಸ್ತುತ ಆಧಾರ ಗ್ರಂಥಗಳು. ಇವುಗಳನ್ನು ಮೂಲವಾಗಿಟ್ಟುಕೊಂಡು ಅನೇಕ ವ್ಯಾಕರಣಗ್ರಂಥಗಳು ರಚಿತವಾಗಿವೆ. ಅವುಗಳಲ್ಲಿ ಭರ್ತೃಹರಿಯ **‘ವಾಕ್ಯಪದೀಯ’**ವೂ ಒಂದು.

ವ್ಯಾಕರಣಶಾಸ್ತ್ರವನ್ನು ‘ಅಕ್ಷರ ಸಮಾಮ್ನಾಯ’ ಎಂದೂ ಕರೆಯುತ್ತಾರೆ. ಇದು ಬ್ರಹ್ಮತತ್ತ್ವವನ್ನು ಪ್ರತಿಪಾದಿಸುವ ವರ್ಣಗಳ ರಾಶಿ ಎಂದು, ಶಿವಗಣದಲ್ಲಿ ಪ್ರಧಾನವಾದ ಶಿವನ ವಾಹಕನಾದ ನಂದಿಯು, ಶಿವನು ನುಡಿಸಿದ ಡಮರು ನಾದದ ಅರ್ಥ ವಿವರಣೆ ನೀಡುತ್ತಾ ‘ನಂದಿಕೇಶ್ವರ ಕಾರಿಕೆ’ಯಲ್ಲಿ ಸುಸ್ಪಷ್ಟವಾಗಿ ತಿಳಿಸಿದ್ದಾನೆ:

ಅಕಾರೋ ಬ್ರಹ್ಮರೂಪಃ ಸ್ಯಾನ್ನಿರ್ಗುಣಃ ಸರ್ವವಸ್ತುಷು ।
ಚಿತ್ಕಲಾಮಿಂ ಸಮಾಶ್ರಿತ್ಯ ಜಗದ್ರೂಪ ಉಣೀಶ್ವರಃ ॥

ಬ್ರಹ್ಮರೂಪವು ನಿರ್ಗುಣವೇ ಆಗಿದ್ದರೂ ಸಕಲ ವಸ್ತುಜಾತವಾಗಿ ವ್ಯಕ್ತಗೊಂಡಾಗ ಅನಂತಕಲ್ಯಾಣಗುಣಗಣ ಆಕಾರವುಳ್ಳವನಾಗಿರುತ್ತಾನೆ. ವಿಶ್ವಾಂಡವಾಗಿ ವಿಭಿನ್ನವೂ ವಿಶಿಷ್ಟವೂ ವಿಚಿತ್ರವೂ ಆದ ರೀತಿಯಲ್ಲಿ ವಿಕಾಸಗೊಂಡ ಅವನ **(ಚಿತ್ಕಲೆ)** ಶಕ್ತಿಯೇ ಪರಾಶಕ್ತಿ. (ಇದು ಸಕಲ ವಸ್ತುಗಳಲ್ಲಿ **ಪರಾ, ಪಶ್ಯಂತೀ, ಮಧ್ಯಮಾ, ವೈಖರೀ** ಶಬ್ದರೂಪಗಳಲ್ಲಿ ನೆಲೆಸಿದೆ.) ವಿಶ್ವ ಆಕಾರಳಾದ ಆಕೆಯಲ್ಲಿ ಬ್ರಹ್ಮ ಸುಪ್ರತಿಷ್ಠಿತವಾಗಿದೆ. ಮರವು ಹೇಗೆ ಸಾವಿರಾರು ಶಾಖೆ ಉಪಶಾಖೆಗಳೊಡಗೂಡಿ ಎಣಿಕೆಗೆ ಸಿಗದಷ್ಟು ಎಲೆ ಹೂವು ಹೀಚು ಇತ್ಯಾದಿ ರೂಪಗಳಲ್ಲಿರುತ್ತದೆಯೋ

ಹಾಗೆಯೇ ಶಿವನು (ಪರಬ್ರಹ್ಮವು) ಸಗುಣವಾಗಿ ವ್ಯಾಪಕನಾಗಿ ಭೂಮಿ ಮೊದಲಾದ ರೂಪದಲ್ಲಿ ವಿಶ್ವಾತ್ಮಕನಾಗಿ ವಿರಾಜಿಸುತ್ತಾನೆ.

## 'ವಾಕ್ಯಪದೀಯ'

ಮಹಾವಿರಾಗಿಯೂ ಯೋಗಿಶ್ರೇಷ್ಠನೂ ಆದ ಭರ್ತೃಹರಿಯು ತನ್ನ 'ವಾಕ್ಯಪದೀಯ'ದಲ್ಲಿ ಇದೇ ತತ್ತ್ವವನ್ನು ಸುಸ್ಪಷ್ಟವಾಗಿ, ವಿಸ್ತಾರವಾಗಿ ಪ್ರತಿಪಾದಿಸಿದ್ದಾನೆ. ಹೆಸರೇ ಸೂಚಿಸುವಂತೆ ಪದ ಮತ್ತು ವಾಕ್ಯಗಳಿಗೆ ಸಂಬಂಧಿಸಿದ ಅಕ್ಷರಗಳ ಸಮೂಹವಾದ ಮೂಲಶಬ್ದ-ಪ್ರಕೃತಿ ಮತ್ತು ಅದಕ್ಕೆ ಸೇರಿಸುವ ಪ್ರತ್ಯಯಗಳು, ಅವುಗಳಿಂದಾದ ಪದ ಮತ್ತು ಪದ ಸಮೂಹವಾದ ವಾಕ್ಯ; ಈ ವಿಚಾರಗಳನ್ನು ಈ ಗ್ರಂಥವು ದಾರ್ಶನಿಕ ಹಿನ್ನೆಲೆಯಲ್ಲಿ ವಿವರಿಸುತ್ತದೆ. ಇದರಲ್ಲಿ ಬ್ರಹ್ಮಕಾಂಡ, ವಾಕ್ಯಕಾಂಡ, ಪದಕಾಂಡ ಎಂದು ಮೂರು ವಿಭಾಗಗಳಿವೆ. ಪದಗಳು ಅರ್ಥವನ್ನು ಕೊಡುವಲ್ಲಿ ಆಶ್ರಯಿಸುವ ಜಾತಿ, ದ್ರವ್ಯ, ಕ್ರಿಯಾ, ಕಾಲ, ದಿಕ್, ಲಿಂಗ ಮೊದಲಾದವುಗಳನ್ನು ಬೇರೆ ಬೇರೆಯೇ ಆದ 'ಜಾತಿ ಸಮುದ್ದೇಶ', 'ದ್ರವ್ಯಸಮುದ್ದೇಶ' ಇತ್ಯಾದಿ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ. ಇದೆಲ್ಲವೂ ನಿತ್ಯ ಸದ್ವಸ್ತುವಾದ '**ಪರತತ್ತ್ವ**'ದಿಂದ ವಿಕಾಸಗೊಂಡ ಹಿರಣ್ಯಗರ್ಭಾಂಡ ವಿಶ್ವಾಂಡದಂತೆ ಕಾಲ್ಪನಿಕವೇ ಆಗಿದೆ ಎಂದೂ ಇಲ್ಲಿ ಪ್ರತಿಪಾದಿಸಲಾಗಿದೆ.

## ಶಬ್ದಬ್ರಹ್ಮ

ಚರಾಚರಾತ್ಮಕವಾದ ಈ ಪ್ರಪಂಚ ಸೃಷ್ಟಿಗೂ ಮೊದಲು 'ಪರಾ' ಎಂದು ಅಶಬ್ದ (ವ್ಯಕ್ತವಲ್ಲದ ಶಬ್ದರಹಿತ) ಕೇವಲ ಚೈತನ್ಯ ಸ್ವರೂಪದಲ್ಲಿರುತ್ತದೆ. ವ್ಯಕ್ತವಾಗಬೇಕೆಂಬ ಸಂಕಲ್ಪವಾದಾಗ ಅದು ಶಬ್ದರೂಪ ತಳೆಯುತ್ತದೆ. ಹೀಗೆ ರೂಪ ತಳೆದ ಶಬ್ದವು, ಯೋಗ್ಯತಾ, ಲಕ್ಷಣಾ, ಆಕಾಂಕ್ಷಾ ಮೊದಲಾದ ಶಕ್ತಿಗಳೊಡಗೂಡಿ ಅರ್ಥಬೋಧಕವಾಗುತ್ತದೆ. ಅಂತೆಯೇ ಧರ್ಮ-ಅಧರ್ಮ, ಪ್ರತಿಬಂಧ, ಅನುಜ್ಞಾ ಮೊದಲಾದ ಅನಂತಶಕ್ತಿಗಳನ್ನು ಧರಿಸಿಕೊಳ್ಳುವ ಕಾಲಶಕ್ತಿ ಅವಿದ್ಯಾಶಕ್ತಿ ಎಲ್ಲವನ್ನೂ ಅದು ತನ್ನೊಳಗೇ ಧರಿಸಿರುತ್ತದೆ. ಹೀಗೆ ಇದು ಕಲ್ಪನಾತೀತ ಬೃಹದ್ಗಾತ್ರವುಳ್ಳ 'ಭೂಮವಸ್ತು' ಆದುದರಿಂದ ಇದನ್ನು '**ಶಬ್ದಬ್ರಹ್ಮ**' ಎನ್ನಲಾಗಿದೆ.

ಈ ಶಬ್ದವೇ ವಸ್ತುಗಳಲ್ಲಿ ಹಾಗೂ ಜೀವಿಗಳಲ್ಲಿ ಇರುವ ಪ್ರವೃತ್ತಿ-ನಿವೃತ್ತಿರೂಪ ಕ್ರಿಯಾ ವಿಭಾಗಗಳಿಗೂ ಕಾರಣವಾಗಿದೆ *('ವಾಕ್ಯಪದೀಯ', ಬ್ರಹ್ಮಕಾಂಡ ಶ್ಲೋಕ ೧೧೮).* ಪ್ರವೃತ್ತವಾದ ಶಬ್ದ, ಅಭಿವ್ಯಕ್ತಿ ಬೇಡವೆನ್ನಿಸಿದಾಗ ನಿವೃತ್ತವಾಗಿ '**ಪರಾ**' ಎಂಬಲ್ಲಿ ಹೋಗಿ ಲೀನವಾಗುತ್ತದೆ. ಅವ್ಯಕ್ತವಾಗಿ ಚರಾಚರಾತ್ಮಕಗಳಲ್ಲಿ ಗೂಢವಾಗಿದ್ದ, ಭಾವನ ಚಿಂತನ ವಿಚಾರಾದಿಗಳು ವ್ಯವಹಾರದೆಶೆಯಲ್ಲಿ ವ್ಯಕ್ತಗೊಂಡಾಗ 'ಪರಾ'ದಿಂದ ಕ್ರಮವಾಗಿ ಪಶ್ಯಂತೀ, ಮಧ್ಯಮಾ, ವೈಖರೀರೂಪಗಳಿಂದ ಪರಿಣತವಾಗಿ ನಾವು ಕಾಣುತ್ತಿರುವ, ಅನುಭವಿಸುತ್ತಿರುವ, ವಿವಿಧ ಮಾಧ್ಯಮಗಳಿಂದ ತಿಳಿದುಕೊಳ್ಳುತ್ತಿರುವ, ವಿಶ್ವಾಂಡ ಬ್ರಹ್ಮಾಂಡ ರೂಪದಲ್ಲಿ ವಿರಾಜಿಸುತ್ತದೆ. ಮತ್ತೆ ನಿವೃತ್ತವಾದಾಗ ಅವ್ಯಕ್ತ 'ಪರಾ'ದಲ್ಲಿಯೇ ಲೀನವಾಗುತ್ತದೆ. ಇದು ಸೃಷ್ಟಿಯಲ್ಲಿರುವ ಸಮಸ್ತ ವಸ್ತುಜಾತಗಳಿಗೂ (**ಸ್ಥಾವರ**-ಗಿಡ ಮರ ಬೆಟ್ಟಗುಡ್ಡ.... ಮತ್ತು ಮರ ಲೋಹ ಮುಂತಾದವುಗಳಿಂದ ನಿರ್ಮಿತವಾದ ಅನಂತ ನಿತ್ಯೋಪಯೋಗಿ ವಸ್ತುಗಳು; **ಜಂಗಮ** -ನದಿ-ನದ ಸಕಲವಿಧ, ಕೀಟ, ಕೋಟೆಗಳು, ಜೀವಿಗಳು, ನಕ್ಷತ್ರಕಾಯಗಳು, ಆಕಾಶಕಾಯಗಳು.. ಇತ್ಯಾದಿ) ಸಮಾನ. *('ವಾಕ್ಯಪದೀಯ', ಬ್ರಹ್ಮಕಾಂಡ, ಶ್ಲೋಕ ೧೨೯)*

## ಶಬ್ದಬ್ರಹ್ಮ-ಪರಬ್ರಹ್ಮರು ಅಭಿನ್ನ

ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ರೂಪ ನಾಲ್ಕು ವಿಧ ಶಬ್ದಗಳೂ ಪರಬ್ರಹ್ಮದ ಶಕ್ತಿಸ್ವರೂಪವೇ ಆಗಿದೆ. ಚಂದ್ರನಿಂದ ಆತನ ಬೆಳದಿಂಗಳು ಚಂದ್ರಿಕೆ, ಅಗ್ನಿಯಿಂದ ಅದರ ಸುಡುವಿಕೆ, ಹೇಗೆ ಬೇರೆ ಅಲ್ಲವೋ ಅದೇ ರೀತಿ ಪರಬ್ರಹ್ಮಕ್ಕಿಂತ ಅದರ ಈ ಶಕ್ತಿ ಬೇರೆ ಅಲ್ಲ. ಇವುಗಳ ಈ ಸಂಬಂಧ ನಿತ್ಯ. ಆದುದರಿಂದ ಪರಬ್ರಹ್ಮವು ತನ್ನ ಶಕ್ತಿ(ಶಬ್ದ)ಯೊಡಗೂಡಿ ಸಕಲ ಚರಾಚರಾತ್ಮಕ ಜಗತ್ತನ್ನು ನಿರ್ಮಿಸುತ್ತಾನೆ. '**ವಾಗೇವ ವಿಶ್ವಾಭುವನಾನಿ ಜಜ್ಞೇ**'- ಎಂಬ ಶ್ರುತಿವಾಕ್ಯ ಇದನ್ನು ದೃಢಪಡಿಸುತ್ತದೆ.

ಇವುಗಳಲ್ಲಿ ಪರಾ, ಪಶ್ಯಂತೀ, ಮಧ್ಯಮಾ ಶಬ್ದಗಳು ಪ್ರತಿ ಜೀವಿಗಳ ಒಳಗೆ ಗೂಢವಾಗಿ 'ನಿತ್ಯ'ವಾಗಿ ಸದಾ ಇರುತ್ತವೆ. ಅವು ಹೊರಗೆ ಪ್ರಕಟಗೊಳ್ಳುವುದಿಲ್ಲ. ಈ ವಿಶ್ವಾಂಡವು ಸೃಷ್ಟಿಯಾಗುವ ಕೋಟಿ ಕೋಟಿ ವರ್ಷಗಳಿಗೂ ಮೊದಲು ಈ 'ಶಬ್ದ' ಇದ್ದಿತು. ನಂತರವೂ ಅನಂತ ಕೋಟಿ ವರ್ಷಗಳ ಕಾಲ ಇವು ಇದ್ದೇ ಇರುತ್ತವೆ. ಹಾಗಾಗಿ, ಯೋಗಮಾರ್ಗದಲ್ಲಿ ಸಂಚರಿಸಬಲ್ಲ ಯೋಗಿಯು, ಭೂತಕಾಲದ (ಅನಂತಕೋಟಿ ವರ್ಷ ಹಳೆಯ) ವರ್ತಮಾನ ಕಾಲದ ಅಂತೆಯೇ ಭವಿಷ್ಯತ್ತಿನ (ಎಷ್ಟೋ ಸಹಸ್ರಾರು ವರ್ಷಗಳ ನಂತರದ) ಎಲ್ಲಾ ಶಬ್ದಗಳನ್ನೂ ಗ್ರಹಿಸಬಲ್ಲ.

ಜೀವಿಗಳ ಹೃದಯಭಾಗದಲ್ಲಿ ಅತ್ಯಂತ ಸೂಕ್ಷ್ಮವಾದ ಗುಹೆ ಇದೆ. ಅದರೊಳಗೆ ಮತ್ತೂ ಸೂಕ್ಷ್ಮವಾದ,(ಸಕಲಭೇದ, ದ್ವಂದ್ವ ರಹಿತವಾದ ಕಾರಣ), ಶೋಕರಹಿತವಾದ ಆಕಾಶ ಇದೆ. ಅದಕ್ಕೂ ಒಳಕ್ಕೆ ನಿತ್ಯವೂ ನಿರಂಜನವೂ ನಿರ್ವಿಕಲ್ಪವೂ ನಿರಾಖ್ಯಾತವೂ ನಿಷ್ಪ್ರಪಂಚವೂ ಆದ ಜ್ಯೋತಿ(ಶಬ್ದರೂಪ) ಬೆಳಗುತ್ತಿರುತ್ತದೆ. ಯೋಗಿಗಳು ತಮ್ಮ ಧ್ಯಾನದಲ್ಲಿ ಅದನ್ನು ಸದಾ ಕಾಣುತ್ತಿರುತ್ತಾರೆ. ಅದೇ '**ಪಶ್ಯಂತೀ**'.[೧] ಈ ಪಶ್ಯಂತೀ ಪ್ರಾಣಾನಲದಿಂದ ಪ್ರೇರಿತ

---

೧ **ದಹ್ರಂ ವಿಪಾಪ್ಮಂ ಪರಮೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯ ಸಗ್ಗ್ಂಸ್ಥಮ್। ತತ್ರಾಪಿ ದಹ್ರಂ ಗಗನಂ ವಿಶೋಕಸ್ತಸ್ಮಿನ್ ಯದಂತಸ್ತದುಪಾಸಿತವ್ಯಮ್।** 'ಈ ಪುರದ ಮಧ್ಯದಲ್ಲಿ ಪರತತ್ತ್ವದ ಮನೆಯಾಗಿರುವ ಅತ್ಯಂತ ಸೂಕ್ಷ್ಮವಾದ ಪಾಪರಹಿತವಾದ ಕಮಲವಿದೆ. ಅದಕ್ಕೂ ಒಳಭಾಗದಲ್ಲಿ ಇನ್ನಷ್ಟು ಸೂಕ್ಷ್ಮವಾದ, (ಜಯ-ಅಪಜಯ, ಮನ-ಅಪಮಾನವೇ ಮೊದಲಾದ ದ್ವಂದ್ವಗಳ ಬಾಧೆಯಿಲ್ಲದ್ದರಿಂದ) ಶೋಕರಹಿತವಾದ ಆಕಾಶವಿದೆ. ಅದಕ್ಕೂ ಒಳಭಾಗದಲ್ಲಿರುವ ಅದನ್ನು ಉಪಾಸನೆ ಮಾಡಬೇಕು.'

*(ಮಹಾನಾರಾಯಣೋಪನಿಷತ್)*

ವಾಗಿ ವಿಶುದ್ಧಚಕ್ರವನ್ನು ಸೇರಿ '**ಮಧ್ಯಮಾ**' ಎನ್ನಿಸಿಕೊಳ್ಳುತ್ತದೆ. '**ವೈಖರೀ**' ಮಾತು ಮಾತ್ರ ಪ್ರಾಣ ಅಪಾನ ಪ್ರೇರಿತ ಅಗ್ನಿಯ ಸಂಸ್ಪರ್ಶಹೊಂದಿ ಕಂಠ, ತಾಲು, ಮೊದಲಾದ ಅಕ್ಷರಗಳ ಹುಟ್ಟು ಸ್ಥಾನಗಳಿಂದ ವರ್ಣಗಳಾಗಿ ಹೊರಗೆ ವ್ಯಕ್ತವಾಗುತ್ತದೆ. ಇದೇ ವೇದ ಮೊದಲಾದ ವಿಶ್ವಸಾಹಿತ್ಯಾತ್ಮಕ ಶಬ್ದ ಪ್ರಪಂಚವಾಗಿ ವಿಕಾಸ ಗೊಳ್ಳುತ್ತದೆ.[೨]

'**ನಾಮೈವೇದಂ ರೂಪತ್ವೇನ ವವೃತೇ ರೂಪಂ ಚೇದಂ ನಾಮ ಭಾವೇಽವತಸ್ಥೇ।**' *('ವಾಕ್ಯಪದೀಯ, ಬ್ರಹ್ಮಕಾಂಡ, ಶ್ಲೋಕ೧೨)*

ಹೀಗೆ ಅಶಬ್ದದಿಂದ (ಪರಾದಿಂದ) ಶಬ್ದವಾಗಿ ವಿಕಾಸಗೊಂಡ ಶಬ್ದಗಳಿಗೆ ಹಾಗೂ ಲೋಕವೇದಗಳಿಗೆ ಸಂಬಂಧವನ್ನು ಉಂಟು ಮಾಡುವ ಕರ್ತೃ ಬೇರೊಬ್ಬನಿಲ್ಲ. ಶಬ್ದಗಳಿಗೆ ಶಬ್ದದಿಂದಲೇ ಸಂಬಂಧ *('ವಾಕ್ಯಪದೀಯ', ಬ್ರಹ್ಮಕಾಂಡ ಶ್ಲೋಕ ೨೬)*. ಶಬ್ದ ಮತ್ತು ಅರ್ಥಗಳ ಸಂಬಂಧ ನಿತ್ಯವೆಂದು ಸೂತ್ರ ಭಾಷ್ಯಾದಿಗಳನ್ನು ರಚಿಸಿದ ಮಹರ್ಷಿಗಳು ಸಾರಿದ್ದಾರೆ. *(ಶ್ಲೋಕ, ೨೩)*

ಶಬ್ದಸಂಸ್ಕಾರದೊಡಗೂಡಿದ ಈ ರೀತಿಯ 'ಶಬ್ದಬ್ರಹ್ಮ'ದ ಆಮೂಲಾಗ್ರ (ಪರಾದಿಂದ ವೈಖರೀ ವರೆಗೆ, ವೈಖರೀ ಯಿಂದ ಪರಾವರೆಗೆ) ಜ್ಞಾನ ಪಡೆದಿರುವವನು, ಶಬ್ದ ಶಬ್ದಾರ್ಥಗಳ (ವಾಚ್ಯ-ವಾಚಕಗಳ) ಸಂಬಂಧದ ಮರ್ಮವನ್ನರಿತವನು ಬ್ರಹ್ಮ ಅಮೃತವನ್ನು ಹೊಂದುವವನು, ಎಂದು ಇಲ್ಲಿ ಹೇಳಿದೆ:

**ತಸ್ಮಾದ್ಯಃ ಶಬ್ದಸಂಸ್ಕಾರಃ ಸಾ ಸಿದ್ಧಿಃ ಪರಮಾತ್ಮನಃ।**
**ತಸ್ಯ ಪ್ರವೃತ್ತಿತತ್ತ್ವಜ್ಞಃ ತದ್‌ಬ್ರಹ್ಮಾಮೃತಮಶ್ನುತೇ ॥**
*(ಬ್ರಹ್ಮಕಾಂಡ, ಶ್ಲೋಕ೧೩೨)*

### ಮುಕ್ತಿಮಾರ್ಗ

ಅಶಬ್ದದ ಶಬ್ದವಿಸ್ತಾರದ ಮೂಲಾಗ್ರ ಅರ್ಥಬೋಧೆಯು ಬುದ್ಧಿಗತ ಚೈತನ್ಯನಲ್ಲಿರುತ್ತದೆ. ಅದನ್ನು (ಶಬ್ದಾತ್ಮವನ್ನು) ಕ್ರಮ ಸಂಹಾರ ಯೋಗದಿಂದ ಅಶಬ್ದದಲ್ಲಿ ಉಪಸಂಹರಿಸಿ (ಲೀನ ಗೊಳಿಸಿ) ವ್ಯಕ್ತಿ ಪ್ರಾಣವೃತ್ತಿಯಿಂದ ಮೇಲೇರಿ 'ಶಬ್ದ'ತತ್ತ್ವದಲ್ಲಿ ನೆಲೆನಿಲ್ಲಬೇಕು. ಜ್ಞಾನದಲ್ಲಿ ವಾಕ್ಕನ್ನಿರಿಸಿ, ವಾಕ್ಕಿನ ಆಯಾಯ ಸ್ಥಾನಗತ ಭೇದಗಳ ಅವಿದ್ಯೆಯಿಂದ ಉಂಟಾಗುವ ವಿಕಾರಗಳ[೩] ಮರ್ಮವನ್ನರಿತು, ಅವುಗಳಿಂದ ಉಂಟಾಗುವ ಬಂಧನವನ್ನು ಕಳಚಿಕೊಳ್ಳಬೇಕು. ಆನಂತರ ಅಂತರಂಗದಲ್ಲಿ ಜ್ವಲಿಸುತ್ತಿರುವ ಶಬ್ದಬ್ರಹ್ಮಾತ್ಮಕ ಜ್ಯೋತಿಯನ್ನು ಹೊಂದಿ ಎಲ್ಲಾ ಗಂಟುಗಳನ್ನೂ ಕತ್ತರಿಸಿಕೊಂಡು ಪರಾಜ್ಯೋತಿಯಲ್ಲಿ ಒಂದಾಗಬೇಕು.

**ಜ್ಯೋತಿರಾಂತರಮಾಸಾದ್ಯ ಛಿನ್ನಗ್ರಂಥಿ-ಪರಿಗ್ರಹಃ।**
**ಪರೇಣ ಜ್ಯೋತಿಷೈಕತ್ವಂ ಛಿತ್ವಾ ಗ್ರಂಥೀನ್ ಪ್ರಪದ್ಯತೇ ॥**

ಹೀಗೆ ಈ ಶಬ್ದಬ್ರಹ್ಮವು ಮೋಕ್ಷವನ್ನು ಕರುಣಿಸುವ ವೇದಾಂತ ವಿದ್ಯಾ ಸ್ವರೂಪವುಳ್ಳದ್ದೂ(ನಿವೃತ್ತ್ಯಾತ್ಮಕ) ಪ್ರಪಂಚದಲ್ಲಿ ಬದುಕಲು ಉಪಯೋಗವಾಗುವ ವಿವಿಧ ವಿದ್ಯೆಗಳ (ಪ್ರವೃತ್ತ್ಯಾತ್ಮಕ) ಸ್ವರೂಪ ವುಳ್ಳದ್ದೂ ಆಗಿದೆ.[೪]

### ಉಪಸಂಹಾರ

'**ಅಸದ್ವಾ ಇದಮಗ್ರ ಆಸೀತ್ತತೋ ವೈ ಸದಜಾಯತ**' ಎಂಬ ಶ್ರುತಿವಾಕ್ಯವು, ಅವ್ಯಕ್ತವಾದ (ಅಸತ್) ಶಬ್ದವೇ ಮೊದಲಿಗೆ ಇದ್ದು ಅದು ಮುಂದೆ ಸದ್ವಸ್ತುವಾದ ವಿಶ್ವಾತ್ಮಕ ಚರಾಚರವಸ್ತುಗಳಾಗಿ ವಿವರ್ತಗೊಂಡಿತು ಎಂದು ತಿಳಿಸುತ್ತದೆ. ಅದರಂತೆ ಭರ್ತೃಹರಿ 'ವಾಕ್ಯಪದೀಯ'ದಲ್ಲಿ, ''ಅಶಬ್ದವು ('ಪರಾ') ನಿತ್ಯವೂ ಅನಾದಿ ನಿಧನವೂ ಆದುದು. ಅದು ಪ್ರವೃತ್ತವಾದಾಗ ಕ್ರಮವಾಗಿ ವಿಕಾಸ ಗೊಳ್ಳುತ್ತಾ ಈ ಎಲ್ಲವೂ ಆಗುತ್ತದೆ. ಅದೇ ನಿವೃತ್ತವಾದಾಗ ಮತ್ತೆ ಆ ಶಬ್ದದಲ್ಲೇ ಲೀನವಾಗುತ್ತದೆ. 'ಅಶಬ್ದ'ದ ಈ ಪ್ರವೃತ್ತಿ-ನಿವೃತ್ತಿ ರೂಪ ಪ್ರಕ್ರಿಯೆಯು ಪ್ರತಿ ಜೀವಿಯ ಪ್ರತಿದಿನದ ಅನುಭೂತಿಗೆ, ಸಮಸ್ತ ವಿಶ್ವದ ಆಗು-ಹೋಗುಗಳಿಗೆ, ಅದರ ಆತ್ಯಂತಿಕ ಪ್ರಳ ಯಕ್ಕೆ ಪುನಃ ಸೃಷ್ಟಿಗೆ ಕಾರಣವಾಗುತ್ತದೆ. ಈ ಮರ್ಮವನ್ನರಿತ ವನು, ಏನೂ ಇಲ್ಲದ, ಕಾಲ್ಪನಿಕವಾದವುಗಳನ್ನು ಕ್ರಮವಾಗಿ ಒಂದರೊಳಗೆ ಒಂದಾಗಿ ಲೀನಗೊಳಿಸುತ್ತಾ ಬ್ರಹ್ಮಾಮೃತವನ್ನು ಅನುಭವಿಸುವನು. '**ಬ್ರಹ್ಮೈವ ಸ ಬ್ರಹ್ಮವಿತ್**' ಎಂಬಂತೆ ಬ್ರಹ್ಮವೇ ಆಗಿಬಿಡುವನು'' ಎಂದು ಸಿದ್ಧಪಡಿಸಿರುವನು.

---

೨. **ಸರ್ವಂಪರಾತ್ಮಕಂ ಪೂರ್ವಂ ಜ್ಞಪ್ತಿಮಾತ್ರಮಿದಂ ಜಗತ್।**
**ಜ್ಞಪ್ತೇರ್ಬಭೂವ ಪಶ್ಯಂತೀ ಮಧ್ಯಮಾ ವಾಕ್ ತತಃ ಸ್ಮೃತಾ ॥೫॥**
**ವಕ್ತ್ರೇ ವಿಶುದ್ಧ ಚಕ್ರಾಖ್ಯೇ ವೈಖರೀ ಸಾ ಮತಾ ತತಃ।**
**ಸೃಷ್ಟ್ಯಾವಿರ್ಭಾವಮಾಸಾದ್ಯ ಮಧ್ಯಮಾ ವಾಕ್ ಸಮಾ ಮತಾ ॥೬॥**

'ಮೊದಲಿಗೆ ಎಲ್ಲವೂ 'ಪರಾ' ರೂಪದಲ್ಲಿತ್ತು. ಈ ಸಮಸ್ತ ಜಗತ್ತು ಕೂಡ ಕೇವಲ ಜ್ಞಾನಮಾತ್ರ ಅಥವಾ ತಿಳಿವಳಿಕೆ ಮಾತ್ರವಾಗಿ ಇದ್ದಿತು. ಈ ಜ್ಞಾನದಿಂದ 'ಪಶ್ಯಂತೀ' ಹಾಗೂ ಅದರಿಂದ 'ಮಧ್ಯಮಾ', ವಾಕ್ಕೂ ಉಂಟಾದವು. ಸೃಷ್ಟಿಯಾಗಬೇಕೆಂದಾಗ ಈ ಮಧ್ಯಮಾ ವಾಕ್ ವಿಶುದ್ಧ ಚಕ್ರದಲ್ಲಿ 'ವೈಖರೀ' ರೂಪದಲ್ಲಿ ಪ್ರಕಟಗೊಂಡಿತು.'

ಇದೇ ಅಭಿಪ್ರಾಯ ತೈತ್ತಿರೀಯ ಬ್ರಾಹ್ಮಣದ, '**ತಾಂ ದೇವೀಂ ವಾಚಂ ಹವಿಷಾ ಯಜಾಮಹೇ। ಸಾ ನೋ ದಧಾತು ಸುಕೃತಸ್ಯ ಲೋಕೇ। ಚತ್ವಾರಿ ವಾಕ್ಪರಿಮಿತಾ ಪದಾನಿ ತಾನಿ ವಿದುರ್ಬ್ರಾಹ್ಮಣಾ ಯೇ ಮನೀಷಿಣಃ। ಗುಹಾ ತ್ರೀಣಿ ನಿಹಿತಾ ನೇಂಗಯಂತಿ। ತುರೀಯಂ ವಾಚೋ ಮನುಷ್ಯಾ ವದಂತಿ** *(ತೈತ್ತಿರೀಯ ಬ್ರಾಹ್ಮಣ, ೨.೮.೮)* ಈ ಮಂತ್ರಗಳಲ್ಲಿ ವ್ಯಕ್ತವಾಗಿದೆ. ಈ ರೀತಿಯ ವಾಗ್ರೂಪದಲ್ಲಿ ಕಾಮನೆಗಳನ್ನು(ಅಭೀಷ್ಟಗಳನ್ನು) ವರ್ಷಿಸುವ (ವೃಷಭರೂಪಿ) ಮಹಾದೇವನು ಮನುಷ್ಯನ್ನು ಪ್ರವೇಶಿಸಿದ್ದಾನೆ — ಎಂದು ಈ ಮಂತ್ರದ ಮುಂದುವರಿದ ಭಾಗ ತಿಳಿಸುತ್ತದೆ.

೩ **ಜಾಯತೇ**-ಹುಟ್ಟುತ್ತದೆ, **ಅಸ್ತಿ**-ಇರುತ್ತದೆ, **ವಿಪರಿಣಮತೇ**-ಬದಲಾಗು ತ್ತದೆ, **ವರ್ಧತೇ**-ಬೆಳೆಯುತ್ತದೆ, **ಹ್ರಸತಿ**-ಕ್ಷೀಣಿಸುತ್ತದೆ, **ನಶ್ಯತಿ**-ನಾಶ ವಾಗುತ್ತದೆ — ಇವೇ ಆರು ಬಗೆಯ ವಿಕಾರಗಳು.

೪ '**ದ್ವೇ ವಾವ ಬ್ರಹ್ಮಣೋ ಅಭಿಧ್ಯೇಯೇ ಶಬ್ದಶ್ಚಾಶಬ್ದಶ್ಚಾಥ ಶಬ್ದೇ ನೈವಾ ಶಬ್ದಮಾವಿಷ್ಕ್ರಿಯತೇಽಥ ತತ್ರ ಓಮಿತಿ ಶಬ್ದೋಽನೇನೋರ್ಧ್ವಮುತ್ಕ್ರಾಂತೋಽ ಶಬ್ದೇ ನಿಧನಮೇತ್ಯಥಾ ಹ್ಯೆಷಾ ಗತಿರೇತದಮೃತಮೇತತ್ಸಾಯುಜ್ಯತ್ವಂ ನಿವೃ ತತ್ವಂ..**'(೬.೨೨) *ಮೈತ್ರಾಯಣೀಯ ಉಪನಿಷತ್ತಿನ* ಈ ಮಾತುಗಳು ಜೀವಿಯು ಧ್ಯಾನಿಸಬೇಕಾದ ಬ್ರಹ್ಮವಾಚಕಗಳಾದ ಈ ಶಬ್ದ ಮತ್ತು ಅಶಬ್ದ ಗಳನ್ನು ಕುರಿತು ಹೇಳುತ್ತಿದೆ. ಈ ಕ್ರಮದಲ್ಲಿ ಸಾಧನೆ ಮಾಡುತ್ತಾ ಊರ್ಧ್ವ ಗತಿಯನ್ನು ಹೊಂದಿದವನು ಕ್ರಮೇಣ ಅಮೃತತ್ವವನ್ನೂ ಸಾಯುಜ್ಯವನ್ನೂ ಹೊಂದುವವನೆಂದು ಉಪನಿಷತ್ತು ತಿಳಿಸುತ್ತದೆ.